**<u>ಸಾಕ್ಷಿಯನ್ನು ದಿಃ 24.11.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಮಧ್ಯಂತರ ಅರ್ಜಿ ಅದೇಶದ ಮೇರೆಗೆ ಪಾಟೀ ಸವಾಲುಃ 5 ರಿಂದ 7 ನೇ ಪ್ರತಿವಾದಿ ಪರ ಶ್ರೀ ಡಿ.ಜಿ ವಕೀಲರಿಂದಃ-</u>**

ನಾನು ಪಿ.ಯು.ಸಿ ವರೆಗೆ ಓದಿರುತ್ತೇನೆ. ನಾನು ಕೊತ್ತೆಗಾಲದಲ್ಲಿ ವಾಸ ಮಾಡಿಕೊಂಡಿದ್ದೇನೆ. ಐಟಂ ನಂ.2 ರ ಸರ್ವೆ ನಂ.140/2 ರಲ್ಲಿ 5 ಎಕರೆ 7 ಗುಂಟೆ ಜಮೀನನ್ನು ನನ್ನ ತಂದೆ ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ಆಸ್ತಿ ತಂದೆಯ ಪಿತ್ರಾರ್ಜಿತ ಆಸ್ತಿ ಎಂದು ತೋರಿಸಲು ದಾಖಲೆ ಹಾಜರು ಪಡಿಸಿದ್ದೇನೆ. ಐಟಂ ನಂ.2 ರ ಸರ್ವೆ ನಂ.140/2 ರಲ್ಲಿ 5 ಎಕರೆ 7 ಗುಂಟೆ ಜಮೀನನ್ನು ದಿಃ 29.10.2010 ರಂದು ನನ್ನ ತಂದೆ 5 ನೇ ಪ್ರತಿವಾದಿಯ ಗಂಡ ಚಂದ್ರಶೇಖರ ಎಂಬುವವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ, ಸಾಕ್ಷಿ ಪುನಃ ಹಣ ಸಾಲಕ್ಕಾಗಿ ಆಧಾರ ಮಾಡಿಕೊಡಲಾಗಿತ್ತು ಎನ್ನುತ್ತಾರೆ. ಕ್ರಯ ಪತ್ರದಂತೆ ಚಂದ್ರಶೇಖರ ಎಂಬುವವರ ಹೆಸರಿಗೆ ಖಾತೆ ವಗೈರೆ ಆಗಿದೆ ಎಂದರೆ ಖಾತೆ ಆಗಿರುವುದು ನಿಜ ಎನ್ನುತ್ತಾರೆ. ಸದರಿ ಕ್ರಯ ಪತ್ರಕ್ಕೆ ನನ್ನ ತಂದೆ ಮಹದೇವಪ್ಪ, ಸಹೋದರ ನಾಗೇಂದ್ರ, ನಾನು ಮತ್ತು ಮುಕುಂದ ರವರು ಸಹಿ ಮಾಡಿರುತ್ತೇವೆ ಎಂದರೆ ಸರಿ. ಸದರಿ ಕ್ರಯ ಪತ್ರದ ಪ್ರತಿಯಲ್ಲಿ ಸಾಕ್ಷಿ ತಮ್ಮೆಲ್ಲರ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ.

ಐಟಂ ನಂ. 3 ರ ಸರ್ವೆ ನಂ. 139/2 ರಲ್ಲಿ 1 ಎಕರೆ 8 ಗುಂಟೆ ಜಮೀನನ್ನು ನನ್ನ ತಂದೆ ಮಹದೇವ ಅಕ್ಕಯ್ಯಮ್ಮ ನವರಿದ ಖರೀದ ಮಾಡಿದ ಆಸ್ತಿ ಎಂದರೆ ನಾವೆಲ್ಲರೂ ಸೇರಿ ಖರೀದಿ ಮಾಡಿದ್ದೇವೆ ಎನ್ನುತ್ತಾರೆ. ಆ ಪ್ರಕಾರ ತಂದೆ ಹೆಸರಿಗೆ ಖಾತೆ ವೆಗೈರೆ ಆಗಿರುತ್ತದೆ ಎಂದರೆ ಸರಿ. ಅವರೆ ಸಂಪೂರ್ಣ ಮಾಲೀಕರು ಎಂದರೆ ನಾವೆಲ್ಲರೂ ಸೇರಿ ಮಾಲೀಕರು ಇದ್ದೇವೆ ಎನ್ನುತ್ತಾರೆ. ಸದರಿ ಕ್ರಯ ಪತ್ರದಲ್ಲಿ ಒಟ್ಟು ಕುಟುಂಬದ ಸ್ವತ್ತು ಎಂದು ತೋರಿಸಿರುವುದಿಲ್ಲ. ಸದರಿ ಸ್ವತ್ತು ನನ್ನ ತಂದೆ ಮಹದೇವಪ್ಪ ರವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಸದರಿ ಆಸ್ತಿ ಒಟ್ಟು ಕುಟುಂಬದ ಆಸ್ತಿ ಎಂದು ತೋರಿಸಲು

ನ್ಯಾಯಾಲಯಕ್ಕೆ ಯಾವುದೆ ದಾಖಲೆ ಹಾಜರು ಪಡಿಸಿಲ್ಲ. ಐಟಂ ನಂ. 3 ರ ಸರ್ವೆ ನಂ. 139/2 ರಲ್ಲಿ 1 ಎಕರೆ 8 ಗುಂಟೆ ಜಮೀನನ್ನು ತಂದೆಯವರೆ 5 ನೇ ಪ್ರತಿವಾದಿ ಗಂಡ ಚಂದ್ರಶೇಖರ ರವರಿಗೆ ಕ್ರಯಕ್ಕೆ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಆಧಾರ ಮಾತ್ರ ಮಾಡಿಕೊಟ್ಟಿದ್ದರು ಎನ್ನುತ್ತಾರೆ. ಚಂದ್ರಶೇಖರ ರವರು ಸೌಧಿ ಅರೇಬಿಯಾದಲ್ಲಿ ವೈದ್ಯರಾಗಿದ್ದು, ಮೈಸೂರಿನಲ್ಲಿ ವಾಸ ಇದ್ದರು. ಅವರು ಮಂಡ್ಯ ಜಿಲ್ಲೆಯ, ಕೆ.ಎಂ. ದೊಡ್ಡಿಯ ಅಣ್ಣೂರು ಗ್ರಾಮದವರು ಎಂದರೆ ನನಗೆ ಗೊತ್ತಿಲ್ಲ. ಅವರು ನಮಗೆ ಮತ್ತು ನಮ್ಮ ತಂದೆಗೆ ಆತ್ಮೀಯರಾಗಿದ್ದರು ಎಂದರೆ ಸಾಕ್ಷಿ ತಂದೆಗೆ ಆತ್ಮೀಯರಾಗಿದ್ದರು ಎನ್ನುತ್ತಾರೆ.

ವಾದಿ ಶಶಿಕಲಾ ನನ್ನ ಅಕ್ಕ.ಅವರ ಮದುವೆಯನ್ನು ನನ್ನ ತಂದೆಯೆ ಮಾಡಿಕೊಟ್ಟಿದ್ದರು ಎಂದರೆ ಸರಿ. ನಾನು ಮತ್ತು ವಾದಿ ತುಂಬಾ ಚೆನ್ನಾಗಿದ್ದೇವೆ ಎಂದರೆ ಸರಿಯಲ್ಲ. ನನ್ನ ಮತ್ತು ನನ್ನ ಸಹೋದರರ ಮದುವೆಯನ್ನು ನನ್ನ ತಂದೆಯೆ ಮಾಡಿರುತ್ತಾರೆ ಎಂದರೆ ಸರಿ. ಹಾಗೆಯೆ ನಾನು, ನನ್ನ ತಂದೆ, ನನ್ನ ಸಹೋದರರು ಎಲ್ಲರೂ ಒಟ್ಟಿಗೆ ಇರುತ್ತೇವೆ. ಯಾವುದೆ ವ್ಯವಹಾರ ಮಾಡಬೇಕಾದರೂ ಒಟ್ಟು ಕುಟುಂಬದ ಎಲ್ಲರೂ ಸೇರಿಯೆ ಮಾಡುತ್ತೇವೆ. ಯಾವುದೆ ದಾಖಲೆಗೆ ಸಹಿ ಮಾಡುವ ಮೊದಲು ಅದರಲ್ಲಿ ಬರೆದಿರುವುದನ್ನು ಓದಿಯೆ ಸಹಿ ಮಾಡುವುದು ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.